# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 49/2025

ದಿನಾಂಕ 07 ನೇ ನವೆಂಬರ್ 2025

**ಪಿರ್ಯಾದುದಾರರು** – ರಾಜ್ಯದ ಪರವಾಗಿ ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ದ

**ಆರೋಪಿ** – ರವಿ

## ದೋಷಾರೋಪಣೆ

ಶ್ರೀ ಎಸ್.ಶ್ರೀಧರ, ಬಿ.ಇ., ಎಲ್.ಎಲ್.ಬಿ., ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ. ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಿಸುತ್ತಿದ್ದೇನೆ.

ಆರೋಪಿಯಾದ ನಿಮಗೂ ಚಾಸಾ.1 ಹನುಮಂತ ಇವರಿಗೂ ಒಂದು ವರ್ಷಗಳಿಂದ ಜಗಳ ಆಗುತ್ತಿದ್ದು ಕೇಸು ದಾಖಲಾಗಿದ್ದು ಇದೇ ಹಳೇ ದ್ವೇಷವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆರೋಪಿಯಾದ ನೀವು ದಿಃ06.03.2025 ರಂದು ಬೆಳಿಗ್ಗೆ ಚಾಸಾ.1 ರವರನ್ನು ಕಾಟನಕಲ್ಲು ಗ್ರಾಮದ ಹೂಳು ಎತ್ತುವ ಕೆಲಸಕ್ಕೆ ಹೋಗಿ ಕೆಲಸ ಮುಗಿಸಿ ವಾಪಸ್ಸು ಬರುವಾಗ ಕೆ.ಟಿ ಅಶ್ವಥಪ್ಪನವರ ಅಂಗಡಿಯ ಹತ್ತಿರ ಆರೋಪಿಯಾದ ನೀವು ಚಾಸಾ.1 ರವರಿಗೆ ಹೊಡೆಯುವ ರೀತಿಯಲ್ಲಿ ಬಂದಾಗ ಚಾಸಾ.1 ರವರು ಅದನ್ನು ಪ್ರಶ್ನಿಸಿದಾಗ ಮಾತು ಮಾತು ಬೆಳೆದು ಆರೋಪಿಯಾದ ನೀವು ಚಾಸಾ.1 ರವರೊಂದಿಗೆ ಜಗಳ ಆಡಿ ನೀನು ಇರುವ ವರೆಗೂ ಇದೇ ಗೋಳು ನಿನ್ನನ್ನು ಸಾಯಿಸುವುದಾಗಿ ಹೇಳಿ ಅಲ್ಲಿಂದ ಹೊರಟು ಹೋಗಿದ್ದು ಚಾಸಾ.1 ರವರು ಮ.12.00 ಗಂಟೆ ಸಮಯದಲ್ಲಿ ಕಾಟನಕಲ್ಲು ಗ್ರಾಮದಲ್ಲಿರುವ ತನ್ನ ಮನೆಯಲ್ಲಿ ಮಲಗಿದ್ದಾಗ ಆರೋಪಿಯಾದ ನೀವು ಚಾಸಾ.1 ರವರ

ಮನೆಯ ಬಳಿ ಬಂದು ಚಾಸಾ.1 ರವರನ್ನು ಕೂಗಿದ್ದು ಚಾಸಾ.1 ರವರು ಬಂದು ಆರೋಪಿಯಾದ ನಿಮಗೆ ಮನೆಗೆ ಹೋಗು ಎಂದು ಹೇಳಿ ಮಲಗಿಕೊಂಡಿದ್ದು ಆಗ ಆರೋಪಿಯಾದ ನೀವು ಚಾಸಾ.1 ರವರನ್ನು ಕೊಲ್ಲುವ ಉದ್ದೇಶದಿಂದ ಬಚ್ಚಿಕೊಂಡು ತಂದಿದ್ದ ಡಿಸೇಲ್ ಅನ್ನು ಚಾಸಾ.1 ರವರ ಬೆನ್ನಿನ ಮೇಲೆ ಎರಚಿ ಬೆಂಕಿ ಹಚ್ಚಿ ಓಡಿಹೋಡಿದ್ದು ಚಾಸಾ.1 ರವರ ಬೆನ್ನು ಸುಟ್ಟು ತೀವ್ರ ಸ್ವರೂಪದ ಗಾಯ ಉಂಟಾಗಿದ್ದು ಆರೋಪಿಯಾದ ನೀವು ಮೇಲ್ಕಂಡಂತೆ ಕೃತ್ಯ ಎಸಗಿ ಚಾಸಾ.1 ರವರನ್ನು ಕೊಲೆ ಮಾಡಲು ಪ್ರಯತ್ನಿಸಿದ ಕಾರಣ ಬಿ.ಎನ್.ಎಸ್ ಕಾಯಿದೆ 109(1) ರಂತೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲ್ಕಂಡ ನಿಮ್ಮ ಮೇಲಿನ ಆರೋಪದ ಬಗ್ಗೆ ವಿಚಾರಣೆಯಾಗಲು ನಾನು ಆದೇಶಿಸುತ್ತೇನೆ.

sd/-

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# <u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

## <u>ಸತ್ರ ಪ್ರಕರಣ ಸಂಖ್ಯೆ: 49/2025</u>

**ಪಿರ್ಯಾದುದಾರರು** – ರಾಜ್ಯದ ಪರವಾಗಿ ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

**ಆರೋಪಿ** – ರವಿ

**<u>ಕಲಂ 263(2)ಬಿ.ಎನ್.ಎಸ್.ಎಸ್(ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆಪಾದಿತನ ಹೇಳಿಕೆ</u>**

**ಪ್ರಶ್ನೆ** 1) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿದ್ದೀಯಾ?

**ಉತ್ತರ:**

**ಪ್ರಶ್ನೆ** 2)ನಿಮ್ಮ ಮೇಲೆ ಮಾಡಲಾಗಿರುವ ದೋಷಾರೋಪಣೆಗೆ ನೀನು ಸಮ್ಮತಿಸುವಿಯೋ ಇಲ್ಲವೇ ವಿಚಾರಣೆಯಾಗಬೇಕೆಂದು ಇಚ್ಚಿಸುವಿಯೋ?

**ಉತ್ತರ:**

ಮೇಲೆ ಹೇಳಿದ ಪ್ರಶ್ನೆಗಳನ್ನು ಅಪಾದಿತನಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಹೇಳಲಾಗಿ, ಆತ ನೀಡಿದ ಉತ್ತರವನ್ನು ಸರಿಯಾಗಿ ದಾಖಲಿಸಿಕೊಂಡಿರುವೆ ಅಂತ ದೃಢಪಡಿಸುತ್ತೇನೆ.

**ದಿನಾಂಕ:** 07.11.2025.

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.